ಕರ್ನಾಟಕ ಸರ್ಕಾರ

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಸಂಖ್ಯೆ: STP/253/07-08

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
7ನೇ ಮಹಡಿ, ಜಲಮಂಡಳಿ ಕಟ್ಟಡ,
ಕಾವೇರಿ ಭವನ, ಬೆಂಗಳೂರು,
ದಿನಾಂಕ: 17-10-2007.

## ಸುತ್ತೋಲೆ

**ವಿಷಯ:** ಫ್ರಾಂಕಿಂಗ್ ಯಂತ್ರದ ಸಹಾಯದಿಂದ ಸ್ಟಾಂಪ್ ಮೊತ್ತವನ್ನು ಸಹಿ ಮಾಡದಿರುವ ದಸ್ತಾವೇಜುಗಳ ಮೇಲೆ ಉಬ್ಬಚ್ಚು ಮಾಡುವಾಗ ವ್ಯಾಪ್ತಿಯನ್ನು ಪರಿಗಣಿಸದಿರಲು ಸೂಚನೆ.

**ಉಲ್ಲೇಖ:** ಈ ಕಛೇರಿಯ ಸುತ್ತೋಲೆ ಸಂಖ್ಯೆ: STP 16/2004-05, ದಿನಾಂಕ: 10-05-2004.

*-*-*-*-*-*-*

ಕರ್ನಾಟಕ ಮುದ್ರಾಂಕ ನಿಯಮಗಳು 1958 ರ ನಿಯಮ 10 ರಂತೆ ಸಹಿ ಮಾಡದಿರುವ ದಸ್ತಾವೇಜುಗಳ ಮೇಲೆ ಮಾತ್ರ ಸ್ಟಾಂಪ್ ಮೊತ್ತ ಪಾವತಿ ಕುರಿತು, ಫ್ರಾಂಕಿಂಗ್ ಯಂತ್ರದಿಂದ ಸ್ಟಾಂಪ್ ಉಬ್ಬಚ್ಚು ಮಾಡಲು ಅವಕಾಶವಿರುತ್ತದೆ.

ಈ ವಿಷಯವಾಗಿ ಉಲ್ಲೇಖದ ಸುತ್ತೋಲೆಯಲ್ಲಿಯೂ ಸ್ಪಷ್ಟ ಸೂಚನೆ ನೀಡಲಾಗಿದೆ. ಆದರೂ ಉಬ್ಬಚ್ಚು ಮಾಡಲು ಕೆಲವು ಉಪ ನೋಂದಣಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರತಕ್ಕ ದಸ್ತಾವೇಜುಗಳನ್ನು ಮಾತ್ರ ಉಬ್ಬಚ್ಚು ಮಾಡುತ್ತೇವೆಂದು, ಬೇರೆ ವ್ಯಾಪ್ತಿಗೆ ಬರುವ ದಸ್ತಾವೇಜುಗಳನ್ನು ತಿರಸ್ಕರಿಸುತ್ತಿದ್ದಾರೆಂದು ತಿಳಿದು ಬಂದಿದೆ.

ಆದುದರಿಂದ ದಸ್ತಾವೇಜುಗಳನ್ನು ಕರ್ನಾಟಕ ಮುದ್ರಾಂಕ ನಿಯಮ 1958ರ ನಿಯಮ 10 ರಂತೆ ಉಬ್ಬಚ್ಚು ಮಾಡುವಾಗ ಕಛೇರಿಯ ವ್ಯಾಪ್ತಿಯನ್ನು ಪರಿಗಣಿಸದೆ ಉಬ್ಬಚ್ಚು ಮಾಡಲು ಸೂಚಿಸಲಾಗಿದೆ.

ಅಲ್ಲದೆ ಉಲ್ಲೇಖಿತ ಸುತ್ತೋಲೆಯಲ್ಲಿ ಈಗಾಗಲೇ ತಿಳಿಯಪಡಿಸಿರುವಂತೆ, ಫ್ರಾಂಕಿಂಗ್ ಯಂತ್ರದ ಸಹಾಯದಿಂದ ಸ್ಟಾಂಪ್ ಮೊತ್ತವನ್ನು ಸಹಿ ಮಾಡದ ದಸ್ತಾವೇಜುಗಳ ಮೇಲೆ ಬಿಳಿ ಹಾಳೆಯ ಮೇಲಾಗಲೀ ಅಥವಾ ಖಾಲಿ ದಸ್ತಾವೇಜು ಶೀಟುಗಳ ಮೇಲಾಗಲೀ ಸ್ಟಾಂಪ್ ಮೊತ್ತವನ್ನು ಉಬ್ಬಚ್ಚು ಮಾಡದಿರುವ ಬಗ್ಗೆ ನೋಟಿಸನ್ನು ನೋಟಿಸ್ ಬೋರ್ಡ್ ಮೇಲೆ ಸಾರ್ವಜನಿಕರ ಮಾಹಿತಿಗಾಗಿ ತಪ್ಪದೇ ಪ್ರದರ್ಶಿಸಲು ಸೂಚಿಸಲಾಗಿದೆ.

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು, ಬೆಂಗಳೂರು.

**ಪ್ರತಿಯನ್ನು:**

1. ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
2. ಕೇಂದ್ರ ಕಛೇರಿಯ RGN / IRF / AUD / BUD ಶಾಖೆಗಳಿಗೆ ಮಾಹಿತಿಗಾಗಿ.
3. ಕಛೇರಿ ಪ್ರತಿ.